ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ? ಭೂವಿವಾದದಿಂದ ಹೆಚ್ಚಿರುವ ಅಪರಾಧಗಳ ಸಂಖ್ಯೆಗಳ ಹಿನ್ನೆಲೆಯಲ್ಲಿ ಭೂ ಕಂದಾಯ ಕಾಯ್ದೆ ಹಾಗೂ ಇತರೇ ಭೂ ಕಂದಾಯಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೂಲಂಕುಷವಾಗಿ ಮರು ಪರಿಶೀಲನೆ ನಡೆಸಲು ಗೃಹ, ಕಂದಾಯ, ಕಾನೂನು ಹಾಗೂ ಸಂಬಂಧಪಟ್ಟವರನ್ನೊಳಗೊಂಡ ಸಮಿತಿ ಅಥವಾ ಟಾಸ್ಕ್ ಫೋರ್ಸನ್ನು ರಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ/

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ಬಂದಿದೆ.

ಆ) ಯಾವುದೆ ಭೂವಿವಾದದಲ್ಲಿ ಲ್ಯಾಂಡ್ ಮಾಫಿಯಾ ಕೈವಾಡವಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಈ ಅಪರಾಧಗಳನ್ನು ಈಗಿರುವ ಕಾನೂನುಗಳ ಅಡಿಯಲ್ಲಿ ಸಮರ್ಪಕವಾಗಿ ನಿರ್ವಹಿಸುತ್ತಿದ್ದು ಟಾಸ್ಕ್‌ಫೋರ್ಸ್‌ನ ಅವಶ್ಯಕತೆ ಇರುವುದಿಲ್ಲ.

ಆನೇಕಲ್ ಕ್ಷೇತ್ರಕ್ಕೆ ಸಣ್ಣ ನೀರಾವರಿ ಇಲಾಖೆವತಿಯಿಂದ ಮಂಜೂರಾಗಿರುವ ಯೋಜನೆಗಳು.

2255(2748)

ಶ್ರೀ ವಿ.ನಾರಾಯಣಸ್ವಾಮಿ(ಆನೇಕಲ್): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆನೇಕಲ್ ಕ್ಷೇತ್ರಕ್ಕೆ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಮಂಜೂರಾಗಿರುವ ವಿವಿಧ ಯೋಜನೆಗಳು ಯಾವುವು;

ಆ) ಮಂಜೂರಾದ ಯೋಜನೆಗಳ ಅನುಷ್ಠಾನಕ್ಕೆ ವಿಳಂಬವಾಗಲು ಕಾರಣಗಳೇನು;

ಇ) ನೀರಿಗಾಗಿ ಏತ ನೀರಾವರಿ ಮತ್ತು ಕೆರೆ ಅಭಿವೃದ್ಧಿ ಯೋಜನೆಗಳ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ವಿವರಗಳು ಈ ರೀತಿ ಇವೆ. (ಅನುಬಂಧ - 1)

ಆ) ಮಂಜೂರಾದ ಯೋಜನೆಗಳ ಕೆಲಸವನ್ನು ಅನುಷ್ಠಾನಗೊಳಿಸಲು ಸ್ಥಳದಲ್ಲಿನ ಭೂಸ್ವಾಧೀನದ ಸಮಸ್ಯೆ, ಕೆರೆಗಳು ತುಂಬಿರುವುದು ಮತ್ತು ಟೆಂಡರ್ ಗುತ್ತಿಗೆದಾರರಿಂದ ಕಾರ್ಯ ನಿರ್ವಹಿಸಲು ಆಗುತ್ತಿರುವ ವಿಳಂಬಗಳು ಯೋಜನೆಗಳ ಅನುಷ್ಠಾನಕ್ಕೆ ವಿಳಂಬವಾಗಲು ಕಾರಣವಾಗಿರುತ್ತವೆ.

ಇ) ಏತ ನೀರಾವರಿ ಕೆರೆ ಅಭಿವೃದ್ಧಿ ಯೋಜನೆಗಳ ಬಗ್ಗೆ ಈ ಕೆಳಕಂಡ ಕಾಮಗಾರಿಗಳನ್ನು 2000-2001ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲು ಪ್ರಸ್ತಾಪಿಸಲಾಗಿದೆ.:

1) ಹಾರಗದ್ದೆ ಕೆರೆಗೆ ಕಾಡು ಚಿಕ್ಕಹಳ್ಳಿ ಕೆರೆಯಿಂದ ಪೋಷಕ ಕಾಲುವೆ ನಿರ್ಮಾಣದ ಕೆಲಸ.

2) ಹಾರಗದ್ದೆ ಕೆರೆಯ ಕೋಡಿ ಕಾಲುವೆ ಮತ್ತು ಕಾಲುವೆ ಅಭಿವೃದ್ಧಿ ಕೆಲಸ.

3) ಸರ್ಜಾಪುರ ಹೋಬಳಿ ನೆರಿಗೆ ಕೆರೆಗೆ ಏತ ನೀರಾವರಿ ಯೋಜನೆಯ ಕೆಲಸ.

ಅನುಬಂಧ

ಆನೇಕಲ್ ಕ್ಷೇತ್ರಕ್ಕೆ ಸಣ್ಣ ನೀರಾವರಿ ಇಲಾಖೆಯಿಂದ 1999-2000ರ ಆಯವ್ಯಯದಲ್ಲಿ ಮಂಜೂರಾದ ವಿವಿಧ ಯೋಜನೆಗಳು ಕೆಳಕಂಡಂತಿವೆ:

ಅ) ಹೊಸ ಕೆರೆಗಳ ನಿರ್ಮಾಣ

1) ಬೊಮ್ಮಂಡಹಳ್ಳಿ ಹತ್ತಿರ ಹೊಸಕೆರೆ ನಿರ್ಮಾಣ (ಮುಂದುವರಿದ ಕಾಮಗಾರಿ) ನಬಾರ್ಡ್.

ಆ) ಕೆರೆ ಕಲ್ಯಾಣ

1) ಮರಸೂರು ದೊಡ್ಡಕೆರೆಯ ತೂಬು ಕಾಲುವೆ ಲೈನಿಂಗ್ ಮಾಡುವುದು. (ಮುಂದುವರಿದ ಕಾಮಗಾರಿ)

2) ಮರಸೂರು ದೊಡ್ಡಕೆರೆಯ ಹೊನ್ನುಡಿಕೆ ದೊಡ್ಡಕೆರೆಗೆ ಬದಲಿನ ಕಾಮಗಾರಿ (ಅಭಿವೃದ್ಧಿ)

3) ಜಿಗಣಿ ಹೋಬಳಿ ಹೆನ್ನಾಗಾರ ದೊಡ್ಡಕೆರೆಯ ಅಭಿವೃದ್ಧಿ (ಮುಂದುವರೆದ ಕಾಮಗಾರಿ)

4) ಸರ್ಜಾಪುರ ದೊಡ್ಡಕೆರೆ ಕಾಲುವೆ ಅಭಿವೃದ್ಧಿ (ಮುಂದುವರೆದ ಕಾಮಗಾರಿ)

5) ಸಿಂಗೇನ ಅಗ್ರಹಾರ ಕೆರೆಯ ಅಭಿವೃದ್ಧಿ (ಮುಂದುವರೆದ ಕಾಮಗಾರಿ)

6) ಹಾರಗದ್ದೆಕೆರೆ ಅಭಿವೃದ್ಧಿ (ಮುಂದುವರೆದ ಕಾಮಗಾರಿ)

7) ಜಿಗಣಿ ದೊಡ್ಡಕೆರೆ ಕೋಡಿ ಕಾಲುವೆ ಅಭಿವೃದ್ಧಿ

ಇ) ಕೆರೆಗಳ ಆಧುನೀಕರಣ:

1) ಮುತ್ತಾನಲ್ಲೂರು ಅಮಾನಿಕೆರೆಯ ಆಧುನೀಕರಣ.

ಉ) ಏತ ನೀರಾವರಿ ಯೋಜನೆಗಳು

1) ಮಾದಪ್ಪನಹಳ್ಳಿ ಏತ ನೀರಾವರಿ ಯೋಜನೆಯಿಂದ ಜಂತಗಾನಹಳ್ಳಿ ಹಾಗೂ ಇತರೆ ಕೆರೆಗಳ ಮೂಲಕ ಸರ್ಜಾಪುರ ದೊಡ್ಡಕೆರೆಗೆ ನೀರು ಸರಬರಾಜು ಯೋಜನೆ.